**ಅಸಲು ದಾವಾ ನಂಃ 53/2016**
**ಪಿ.ಡಬ್ಲ್ಯೂಃ2**

**ದಿನಾಂಕಃ 20-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಶ್ರೀ ಎನ್ ಟಿ ಎಸ್ ವಾದಿ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಬೊಮ್ಮಯ್ಯ ಎಂಬುವವರು ವೀರೇಶ ರವರಿಗೆ ನಿಪಿಃ7 ವಿಲ್ ಯಾನೆ ಮರಣಶಾಸನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಾನು ನಿಪಿಃ7ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಸಹಿಯನ್ನು ಗುರುತಿಸಿದ ಕಾರಣ ಸದರಿ ಸಹಿಯನ್ನು ನಿಪಿಃ7(ಎ) ಎಂದು ಗುರುತಿಸಲಾಯಿತು. ನನ್ನೊಂದಿಗೆ ಓಬಣ್ಣ ಎಂಬುವವರು ನಿಪಿಃ7 ವಿಲ್ ಯಾನೆ ಮರಣಶಾಸನ ಪತ್ರಕ್ಕೆ ಸಹಿ ಹಾಕಿರುತ್ತಾರೆ. ನಿಪಿಃ7ರ ದಾಖಲೆಯನ್ನು ಪಿ ಆರ್ ಗುರುಸಿದ್ದಪ್ಪನವರು ಬಿಖಲಂದಾರರಾಗಿ ಸದರಿ ದಾಖಲೆಯನ್ನು ತಯಾರು ಮಾಡಿರುತ್ತಾರೆ. ಸದರಿ ಬಿಖಲಂದಾರರು ಪ್ರಸ್ತುತವಾಗಿ ಜೀವಂತ ಇರುವುದಿಲ್ಲ. ನಿಪಿಃ7 ಪತ್ರದಲ್ಲಿ ಸರ್ವೇ ನಂ.526, ಒಂದು ಎಕರೆ ಜಮೀನಿಗೆ ಸಂಬಂಧಿಸಿದಂತೆ ಬರೆಯಲಾಗಿದೆ.

ಆದ್ದರಿಂದ ಸದರಿ ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.